## ನೀರೆತ್ತುವ ಏತ!

ಕೆರೆಯ ಒಂದು ಬದಿಯಲ್ಲಿ ಹಗ್ಗವನ್ನು ಜಗ್ಗಿ ಹಿಡಿದು ಗುಂಡಿಗೆ ಹಾರಿದರೆ ಮತ್ತೊಂದು ಬದಿಯಲ್ಲಿ ದೊಡ್ಡ ಕಡಾಯಿಯಲ್ಲಿ ಬಂದ ನೀರು ಬೇಸಾಯದ ಗದ್ದೆಗೆ ಹಾಯಿಸುವ ವಿಧಾನ ಹಿಂದೆ ಇತ್ತು. ಈಗಿನ ಸುಧಾರಿತ ತಾಂತ್ರಿಕತೆ ಇಲ್ಲದ ಕಾಲಮಾನದ ಈ ಕಸರತ್ತನ್ನು ದಿನಕ್ಕೆ ಸುಮಾರು 1000 ಸಲ ಮಾಡುವ ಶ್ರಮಜೀವಿ ಕೃಷಿಕರು ಆಗಿನವರು! ಅವರ ಕೂಡು ಕುಟುಂಬದ ಮನೆಗಳ ನಡುವೆ ಇದ್ದ ಬಾವಿಯಿಂದ ನೀರೆತ್ತುವ ಸಾಧನ ಮರದ ಏತ ಇಂದು ಕಣ್ಮರೆಯಾಗಿ ಒಂದನೇ ತರಗತಿಯ ಪುಸ್ತಕದಲ್ಲಿ ಏ ಪದಕ್ಕೆ ಚಿತ್ರ ಬಳಸಲಾಗುತ್ತಿದೆ.

ಆದರೆ ಮಂಗಳೂರಿನ ಕುಲಶೇಖರದ ಬಳಿ ಪದವು ಮೇಗಿನ ಮನೆಯಲ್ಲಿ ಪಾರಂಪರಿಕ ಏತ, ಕಟ್ಟೆಯಿಲ್ಲದ ಬಾವಿ, ಪಾಚಿ ಕಟ್ಟಿದ ದಂಡೆ ಬದಿ ಎಲ್ಲಾ ಮಾಯವಾಗಿ ಹೊಸ ರೂಪ ಪಡೆದು ನಿಂತಿದೆ. ಸರಿಯಾಗಿ ನೋಡಿದರೆ ಸಿಮೆಂಟ್, ಪೈಪ್, ಸ್ಟೀಲ್ ಬಕೆಟ್ ಬಳಸಿ ಪುನರ್ ನಿರ್ಮಿಸಿದ ಅದೇ ಏತ ! ಪಕ್ಕದ ಮರಗಳಾಕೃತಿ ಕೂಡ! ಸಮಾಧಾನ ಎಂದರೆ ಅದೇ ತಂತ್ರಜ್ಞಾನ ಸಂರಕ್ಷಿಸಲ್ಪಟ್ಟಿದೆ! ಕಾಲ ಮತ್ತು ಅನುಕೂಲಕ್ಕೆ ತಕ್ಕಂತೆ ನವೀಕೃತಗೊಂಡರೂ ಆಕರ್ಷಕವಾಗಿದೆ.

**– ಜಗಜೀವನ್ ಶೆಟ್ಟಿ ಎಂ.**





## ನಂದಿಮುಖಿ ತೀರ್ಥ ಭರಣಿ!

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮಹಾಕೂಟದಲ್ಲಿರುವ ಶ್ರೀ ಮಹಾಕೂಟೇಶ್ವರ ದೇವಾಲಯದ ಸನ್ನಿಧಿಯಲ್ಲಿ ಭಕ್ತರಿಗೆ ತೀರ್ಥ ನೀಡಲು ಬಳಸುವ ಈ ನಂದಿಮುಖಿ ಭರಣಿಯು ಕಂಚಿನಿಂದ ಮಾಡಿದ್ದಾಗಿದೆ.

ನೂರಾರು ವರ್ಷಗಳಷ್ಟು ಪುರಾತನವಾದ ಈ ಭರಣಿಯು ನೋಡಲು ತುಂಬಾ ವಿಶಿಷ್ಟವಾಗಿ ಕಾಣುವುದರ ಜೊತೆಗೆ ಸನ್ನಿಧಿಯ ದರ್ಶನ ಪಡೆಯಲು ನಿತ್ಯ ಬರುವ ಅದೆಷ್ಟೋ ಆಸ್ತಿಕ ಮಹಾಶಯರಿಗೆ ನಂದಿಯ ಬಾಯಿಯಿಂದ ಬರುವ ತೀರ್ಥಧಾರೆ ತನುಮನವನ್ನು ತಣಿಸುತ್ತಿದೆ.

**– ಮ.ಗು.ಬಸವಣ್ಣ, ನಂಜನಗೂಡು**

## ಎತ್ತರದ ಶಿವ ಪ್ರತಿಮೆ

ವಿಜಯಪುರ ನಗರದಿಂದ 3 ಕಿ.ಮೀ ದೂರದಲ್ಲಿರುವ ಉಕ್ಕಲಿ ರಸ್ತೆಯಲ್ಲಿವ 85 ಅಡಿಗಳಷ್ಟು ಎತ್ತರದ ಸಿಮೆಂಟ್ ಹಾಗೂ ಉಕ್ಕಿನಿಂದ ಮಾಡಲಾದ ಬೃಹತ್ ಶಿವನ ಪ್ರತಿಮೆಯನ್ನು ಕಾಣಬಹುದು. ಈ ಶಿವ ಪ್ರತಿಮೆಯ ಕೆಳಬದಿಯಲ್ಲಿ ಪುಟ್ಟ ಶಿವಲಿಂಗವೊಂದನ್ನು ಪ್ರತಿಷ್ಠಾಪಿಸಲಾಗಿದ್ದು, ಸುತ್ತಲಿರುವ ಗೋಡೆಗಳ ಮೇಲೆ ಶಿವ ಚರಿತ್ರೆಯನ್ನು ಕನ್ನಡದಲ್ಲಿ ಕೆತ್ತಲಾಗಿದೆ. ಹೀಗಾಗಿ ಇಡೀ ದೇಶದಲ್ಲಿಯೇ ಅತೀ ವಿಸ್ತಾರ ಮತ್ತು ಅತೀ ಎತ್ತರದ ಎರಡನೇಯ ಶಿವನ ಮೂರ್ತಿ ಇದಾಗಿದೆ. ಅತ್ಯಂತ ಸುಂದರವಾದ ಮಂದಹಾಸ ತೋರುತ್ತಿರುವ ಇಂತಹ ಶಿವನ ಮೂರ್ತಿ ಭಕ್ತರನ್ನು ಸೆಳೆಯುತ್ತಿದೆ.

**– ಗುರುರಾಜ ಬ.ಕನ್ನೂರ, ಬಸವನಬಾಗೇವಾಡಿ**

